ಸಂಪಾದಕೀಯ

## ಬುದ್ಧಿ ಬರೋದು ಯಾವಾಗ?

ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸಂಪರ್ಕಿಸುವ ಪಶ್ಚಿಮಘಟ್ಟಗಳ ಸೆರಗು ಚಾರ್ಮಾಡಿ ಘಾಟ್ ಮಾರ್ಗದಲ್ಲಿ ಮಳೆಯಿಂದ ಎರಡು ಕಡೆ ಭೂಕುಸಿತ ಉಂಟಾಗಿದ್ದು, ಸಾವಿರಾರು ಪ್ರಯಾಣಿಕರು ಒಂದೂವರೇ ದಿನ ಇನ್ನಿಲ್ಲದ ಪಡಿಪಾಟಲು ಅನುಭವಿಸಿದ್ದಾರೆ. ಮಂಗಳೂರಿಗೆ ಸಂಪರ್ಕ ಕಲ್ಪಿಸುವ ಶಿರಾಡಿಘಾಟ್ ರಸ್ತೆಯನ್ನು ದುರಸ್ತಿ ಕಾರಣಕ್ಕೆ ಬಂದ್ ಮಾಡಿದ್ದರಿಂದ ಚಾರ್ಮಾಡಿ ಘಾಟ್ ಮಾರ್ಗದಲ್ಲಿ ವಾಹನ ಸಾಗಣೆ ಒತ್ತಡ ಹೆಚ್ಚಾಗಿತ್ತು. ಎರಡೂ ಮಾರ್ಗದ ವಾಹನಗಳು ಒಂದೇ ರಸ್ತೆಯಲ್ಲಿ ಸಂಚರಿಸಬೇಕಿತ್ತು. ಈಗ ಇಲ್ಲೂ ತೊಂದರೆ ಆಗಿದೆ. ಮಳೆಗಾಲಕ್ಕೆ ಮುನ್ನ ಶಿರಾಡಿಘಾಟ್ ರಸ್ತೆ ದುರಸ್ತಿ ಮಾಡಿ, ಸುಸ್ಥಿತಿಯಲ್ಲಿಟ್ಟಿದ್ದರೆ ಈ ಪರಿಸ್ಥಿತಿ ನಿರ್ಮಾಣ ಆಗುತ್ತಿರಲಿಲ್ಲ. ಏಕಕಾಲಕ್ಕೆ ಎರಡೂ ರಸ್ತೆಗಳು ಬಂದ್ ಆಗಿದ್ದರಿಂದ ಜನ ತಮ್ಮದಲ್ಲದ ತಪ್ಪಿಗೆ ಕಷ್ಟ ಅನುಭವಿಸಿದ್ದಾರೆ. ಮಳೆಗಾಲಕ್ಕೆ ಮೊದಲೇ ರಸ್ತೆಗಳನ್ನು ಸುಸ್ಥಿಯಲ್ಲಿಡುವ ಹೊಣೆ ಸರಕಾರದ ಮೇಲಿದ್ದರೂ ಸಕಾಲದಲ್ಲಿ ಕಾಮಗಾರಿ ಆಗದಿರುವುದಕ್ಕೆ ಬಹುದೊಡ್ಡ ಇತಿಹಾಸವಿದೆ. ಆ ಇತಿಹಾಸಕ್ಕೆ ಈ ವರ್ಷವೂ ಸೇರಿಕೊಂಡಿದೆ. ಮಳೆಗಾಲದಲ್ಲೇ ದುರಸ್ತಿ ಕಾಮಗಾರಿಗೆ ಚಾಲನೆ ನೀಡುವ ಜಿಲ್ಲಾಡಳಿತಗಳ ಮಿದುಳಿನಲ್ಲಿ ಏನಿದೆಯೋ ಗೊತ್ತಿಲ್ಲ. ಮುಂಚೆಯೇ ರಿಪೇರಿ ಮಾಡಿದರೆ ರಸ್ತೆಗಳು ಸುಸ್ಥಿತಿಯಲ್ಲಿದ್ದು, ಜನರ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತದಲ್ಲಾ ಎಂಬ ಸಂಕಟವೋ, ಅರ್ಧಂಬರ್ಧ ಕಾಮಗಾರಿ ಮಳೆನೀರಿನಲ್ಲಿ ಕೊಚ್ಚಿ ಹೋದರೆ 'ರಾಮನ ಲೆಕ್ಕ, ಕೃಷ್ಣನ ಲೆಕ್ಕ' ಹಾಕಲು ಅನುಕೂಲ ಆಗುತ್ತದೆ ಎಂಬ ಎಣಿಕೆಯೋ, ಕೆಲಸ ಮುಗಿಯುವ ಮೊದಲೇ ಕಿತ್ತುಹೋದ ರಸ್ತೆಗಳಲ್ಲಿ ಹೊಸ ಕಾಮಗಾರಿಗಳನ್ನು ಸೃಷ್ಟಿಸಿ ಮತ್ತಷ್ಟು ದುಡ್ಡು ಹೊಡೆಯಬಹುದು ಎಂಬ ದುರಾಲೋಚನೆಯೋ. ಅಂತೂ ಜನರ ಬವಣೆಯಲ್ಲಿ ಲಾಭ ಮಾಡಿಕೊಳ್ಳುವ ಈ ಲೋಭಿ ಜನರು ಯಾವ ಶಬ್ದಗಳಿಂದ ನಿಂದಿಸಿದರೂ ಕಡಿಮೆಯೇ. ಗುಡ್ಡ ಕುಸಿದು ರಸ್ತೆ ಸಂಪರ್ಕ ಕಳೆದುಕೊಂಡ ಜನರ ಸಮಸ್ಯೆ ಆಲಿಸಲು ಸಂಬಂಧಪಟ್ಟ ಅಧಿಕಾರಿಗಳು ಸಕಾಲಿಕ ಮುತುವರ್ಜಿ ವಹಿಸದೇ ಹೋಗಿರುವುದು ಕೂಡ ಅಕ್ಷಮ್ಯ!

## ಚೌಕಟ್ಟು ಬೇಡ

ಅಮೆರಿಕ ಮತ್ತು ಉತ್ತರ ಕೊರಿಯಾದ ಅಧ್ಯಕ್ಷರು ದಶಕಗಳ ವೈರತ್ವ ಮರೆತು ಕೊನೆಗೂ ಪರಸ್ಪರ ಭೇಟಿ ಆಗಿದ್ದಾರೆ. ಡೊನಾಲ್ಡ್ ಟ್ರಂಪ್ ಹಾಗೂ ಕಿಮ್ ಜಾಂಗ್ ಉನ್ ಭೇಟಿ ಸಹಜವಾಗಿಯೇ ಜಗತ್ತಿನ ಗಮನ ಸೆಳೆದಿತ್ತು. ಆರು ತಿಂಗಳ ಪೂರ್ವ ಸಿದ್ಧತೆಯ ನಂತರ ಉಭಯ ನಾಯಕರೂ ಪರಸ್ಪರ ಕೈಕುಲುಕಿದ್ದಾರೆ. ಭೇಟಿ ಮಾಡಿದ ನಂತೆ ಇಬ್ಬರೂ ಜಂಟಿ ಹೇಳಿಕೆಯನ್ನು ಸಹ ಬಿಡುಗಡೆ ಮಾಡಿದ್ದಾರೆ. ಹಾಗೆ ನೋಡಿದರೆ ಈ ಹೇಳಿಕೆಯಲ್ಲಿ ಹೊಸದೇನೂ ಇಲ್ಲ. ಕೊರಿಯಾ ಪರ್ಯಾಯ ದ್ವೀಪವನ್ನು ಅಣ್ವಸ್ತ್ರ ಮುಕ್ತಗೊಳಿಸುವ ತನ್ನ ಪಣವನ್ನು ಉತ್ತರ ಕೊರಿಯಾ ಪುನರುಚ್ಚರಿಸಿದ್ದರೆ, ಅದಕ್ಕೆ ಪ್ರತಿಯಾಗಿ ಉತ್ತರ ಕೊರಿಯಾಗೆ ಬೇಕಾದ ಎಲ್ಲ ರೀತಿಯ ಭದ್ರತಾ ನೆರವನ್ನು ನೀಡುವುದಾಗಿ ಅಮೆರಿಕ ಹೇಳಿದೆ. ಈ ಇಬ್ಬರು ನಾಯಕರು ಏನು ಹೇಳಿದರು, ಯಾವ ಒಪ್ಪಂದಕ್ಕೆ ಸಹಿ ಹಾಕಿದರು ಎನ್ನುವುದಕ್ಕಿಂತ ಹೆಚ್ಚಾಗಿ ಪರಸ್ಪರ ವಿರುದ್ಧ ಧ್ರುವಗಳಂತೆ ಇದ್ದ ಎರಡು ದೇಶಗಳ ನಾಯಕರು ಕನಿಷ್ಠ ಮಾತುಕತೆಯ ಮೇಜಿಗೆ ಬಂದರು ಎಂಬುದೇ ಇಲ್ಲಿ ಪ್ರಮುಖ ಅಂಶವಾಗಿದೆ. ಇಬ್ಬರ ನಡುವೆ ಏರ್ಪಟ್ಟ ಒಪ್ಪಂದ ಕಾರ್ಯರೂಪಕ್ಕೆ ಬರಲು ಎಷ್ಟು ಸಮಯ ತಗುಲುತ್ತದೆ, ಅಥವಾ ಕಾರ್ಯರೂಪಕ್ಕೆ ಬರುತ್ತದೋ ಇಲ್ಲವೋ ಎಂಬ ಪ್ರಶ್ನೆಗೆ ಉತ್ತರ ಈಗ ಸಿಗದು. ಆದರೆ ಜಗತ್ತಿಗೇ ಮಾರಕವಾಗಬಹುದಾಗಿದ್ದ ಯುದ್ಧೋನ್ಮಾದವನ್ನು ತಕ್ಕ ಮಟ್ಟಿಗೆ ತಣಿಸಲು ಇದು ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ. ಆರೇಳು ತಿಂಗಳ ಹಿಂದೆ ಇಂತಹ ಒಂದು ಭೇಟಿಯನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಆದರೆ ಸಂಧಾನದ ಸೆಳೆತದ ಪ್ರಭಾವ ಎಷ್ಟು ಪ್ರಬಲ ಎಂಬುದನ್ನು ಈ ಭೇಟಿ ನಿರೂಪಿಸಿದೆ. ಈ ಭೇಟಿ ಹಸ್ತಲಾಘವಕ್ಕೇ ಸೀಮಿತವಾಗದೇ ಕೊರಿಯಾ ಪರ್ಯಾಯ ದ್ವೀಪದಲ್ಲಿ ಶಾಶ್ವತ ಶಾಂತಿಗೆ ನಾಂದಿ ಹಾಡಲಿ.



### ಚಿತ್ರಸ್ಫೂರ್ತಿ



**ನಿಮ್ಮನ್ನು ಅವಮಾನಿಸುವ, ಅನುಮಾನಿಸುವ, ಅವರಿಗೆ ಬೇಕಾದಂತೆ ಅರ್ಥ ಮಾಡಿಕೊಳ್ಳುವವರ ಸಲುವಾಗಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ.**

### ತಿಳಿಸಾರ

## ಕೃಷಿ ಇನ್ನೂ ಭಾರತದ ಬೆನ್ನೆಲುಬು

ಭಾರತ ಮೂಲತಃ ಕೃಷಿ ಪ್ರಧಾನ ರಾಷ್ಟ್ರ. ಕೆಲ ಸಂದರ್ಭಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಕುಂಠಿತವಾದಲ್ಲಿ ಆದಾಯಕ್ಕಾಗಿ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕೃಷಿ ಹಾಗೂ ಅದರಲ್ಲಿನ ಉದ್ಯೋಗದಲ್ಲಿ ಭಾರತ ಯಾವ ಸ್ಥಾನದಲ್ಲಿದೆ ಎಂದು ಇಲ್ಲಿ ತಿಳಿಸಲಾಗಿದೆ.



| ರಾಷ್ಟ್ರ | ಕೃಷಿ | ಕೃಷಿ ಉದ್ಯೋಗದಲ್ಲಿನ ಮಹಿಳೆಯರು | ಕೃಷಿ ಉದ್ಯೋಗದಲ್ಲಿನ ಪುರುಷರು |
|---|---|---|---|
| ಭಾರತ | 17.46 | 56.36 | 38.35 |
| ಚೀನಾ | 8.83 | 20.5 | 15.18 |
| ಇಂಡೊನೇಷ್ಯ | 13.93 | 29.35 | 32.31 |
| ಬ್ರೆಜಿಲ್ | 4.97 | 4.89 | 14.23 |
| ರಷ್ಯಾ | 4.56 | 5.01 | 8.31 |
| ಅಮೆರಿಕ | 1.05 | 0.88 | 2.33 |
| ವಿಶ್ವದಲ್ಲಿ | 3.79 | 27.27 | 25.97 |
| ದ.ಆಫ್ರಿಕಾ | 2.32 | 3.85 | 6.86 |

### ಕಾಕಾ ಹೋಟ್ಲು




ಪೇಟ ತೊಡಿಸೋಕೆ ಹೋದ್ರೆ, ಜನ ಆಗ್ಲೆ ನಂಗೆ ಟೋಪಿ ಹಾಕಾಗದೆ ಅಂದ್ರಂತೆ ಸಿದ್ದರಾಮಯ್ಯ?




ಓ, ಅದು ಟಿಪ್ಪು ಸುಲ್ತಾನುದ್ದಂತಾ ಅಥವಾ ಸಂಗೊಳ್ಳಿ ರಾಯಣ್ಣಂದಂತಾ?

# ರೀ ರಮೇಶಕುಮಾರ್, ನಿಮ್ಮಂಥವರು ಹೀಗೆ ಮಾಡಬಹುದೇನ್ರಿ?



ಬೇಟೆ

ಜಯವೀರ ವಿಕ್ರಮ್ ಸಂಪತ್ ಗೌಡ

ಅಂಕಣಕಾರರು

ಮೊನ್ನೆ ಮೊನ್ನೆ ತನಕವೂ ಸ್ಪೀಕರ್ ರಮೇಶ ಕುಮಾರ್ ಸರಿಯಾಗಿಯೇ ಇದ್ದರಲ್ಲ, ಈಗ ಆ ಮನುಷ್ಯನಿಗೆ ಏನಾಗಿದೆ? ಉಳಿದವರು ಹಾಗೆ ಮಾಡಿದ್ದರೆ ಯಾರೂ ಏನೂ ಅಂದುಕೊಳ್ಳುತ್ತಿರಲಿಲ್ಲ. ಆದರೆ ರಮೇಶ ಕುಮಾರರಂಥವರೂ ಹಾಗೆ ಮಾಡಿದಾಗ ಹೀಗೆ ಕೇಳಲೇಬೇಕಾಗುತ್ತದೆ.

ಏನೆಂದರೆ, ಅಷ್ಟಕ್ಕೂ ಈ ರಮೇಶಕುಮಾರ್‌ಗೆ ಏನಾಗಿದೆ? ಕೆಲವು ರಾಜಕಾರಣಿಗಳು ಮಲಗುವಾಗ ವಿಗ್ ಕಳಚಿಡುತ್ತಾರೆ. ಇನ್ನು ಕೆಲವರು ಹಲ್ಲುಸೆಟ್ಟು ತೆಗೆದಿಡುತ್ತಾರೆ. ಈ ರಮೇಶಕುಮಾರ್‌ಗೆ ಬುದ್ಧಿಯನ್ನು ಕಳಚಿಡುವ ಅಭ್ಯಾಸವೇನಾದರೂ ಇದೆಯಾ? ಬುದ್ಧಿ ಇರುವವರ್‍ಯಾರೂ ಹೀಗೆ ಮಾಡುತ್ತಿರಲಿಲ್ಲ, ರಮೇಶಕುಮಾರ್ ಅವರಿಂದ ಯಾರೂ ಇಂಥ ನಡೆ ನಿರೀಕ್ಷಿಸಿರಲಿಲ್ಲ. ಆದರೆ ಇವನ್ನೆಲ್ಲ ನೋಡಿದರೆ, ಅವರ ಬೌದ್ಧಿಕ ಮಟ್ಟದ ಬಗ್ಗೆಯೇ ಅನುಮಾನ ಕಾಡಲಾರಂಭಿಸಿದೆ. ನಾವು ಇಷ್ಟಪಟ್ಟ ಅಭಿಮಾನದಿಂದ ಕಂಡ, ವಿಭಿನ್ನ ರಾಜಕಾರಣಿ ಎಂದು ಹೆಮ್ಮೆಪಟ್ಟ ರಮೇಶಕುಮಾರ್ ಇವರೇನಾ ಎಂಬ ಅನುಮಾನ ಕಾಡಲಾರಂಭಿಸಿದೆ.

ರಮೇಶಕುಮಾರ್ ನಮ್ಮೆಲ್ಲರ ನಂಬಿಕೆಗೆ ದ್ರೋಹವೆಸಗಿದ್ದಾರೆ. ತಾವೂ ಒಬ್ಬ ಸಾಮಾನ್ಯ ರಾಜಕಾರಣಿ ಎಂಬುದನ್ನು ಸಾಬೀತುಪಡಿಸಿದ್ದಾರೆ. ಇದನ್ನು ಅವರ ವೈಯಕ್ತಿಕ ಅಥವಾ ಖಾಸಗಿ ವಿಷಯ ಎಂದು ನಿರಾಕರಿಸಲು, ತಿರಸ್ಕರಿಸಲು ಸಾಧ್ಯವಿಲ್ಲ, ರಮೇಶಕುಮಾರ್ ಈ ನಾಡಿನ, ಸಾಮಾಜಿಕ–ರಾಜಕೀಯ ಜೀವನದ ಸಾಕ್ಷಿ ಪ್ರಜ್ಞೆಯಂತಿರುವವರು. ಅವರು ನಮ್ಮ ನಡುವಿನ ರಾಜಕಾರಣಿಗಳಿಂತ ಭಿನ್ನ. ಅವರ ನಡೆ–ನುಡಿ, ಆಚಾರ–ವಿಚಾರ, ನಡೆವಳಿಕೆಗಳೆಲ್ಲ ಉಳಿದವರಿಗಿಂತ ನೂರುಪಾಲು ಉತ್ತಮವಾದುದು. ಅವರು ಮಾತಾಡಿದರೆ, ಅದು ಸದನದ ಒಳಗಿರಬಹುದು, ಹೊರಗಿರಬಹುದು. ಎಲ್ಲರೂ ಗಮನವಿಟ್ಟು ಕೇಳುತ್ತಾರೆ. ಅವರ ಮಾತಿಗೆ ವಿಶೇಷ ಅರ್ಥ, ಮಹತ್ವ ನೀಡಲಾಗುತ್ತದೆ. ನಾಯಕರ ನಡುವೆ ಜನನಾಯಕರಾಗಿ, ಜನನಾಯಕರ ನಡುವೆ ಮಹಾಮುತ್ಸದ್ದಿಯಾಗಿ, ವಿಚಾರವಂತರಾಗಿ, ವಿವೇಕವಂತರಾಗಿ, ಎದ್ದುನಿಲ್ಲುವ ವ್ಯಕ್ತಿತ್ವ ಅವರದು. ಅವರ ಮಾತಿಗೆ ಎಲ್ಲಿಲ್ಲದ ಮನ್ನಣೆ, ಗೌರವ. ನಾಲ್ಕು ಜನರ ವೇದಿಕೆಯಲ್ಲಿ ರಮೇಶಕುಮಾರ್ ಮಾತಾಡಿದರೆ ಮರುದಿನ ಅವರ ಮಾತೇ ಪತ್ರಿಕೆಗಳಲ್ಲಿ ಹೆಡ್‌ಲೈನ್. ಈಗಲೂ ಅದೇ ಗೈರತ್ತನ್ನು ಉಳಿಸಿಕೊಂಡವರು. ಅಲ್ಲದೇ ವಿಧಾನಸಭೆಯ ಸ್ಪೀಕರ್ ಆಗಿ ಸದನದ ಸದಸ್ಯರಿಗೆ ಮೇಲ್ಪಂಕ್ತಿ ಹಾಕಿಕೊಟ್ಟವರು. ತಮಗೆ ಅನಿಸಿದ್ದನ್ನು ಪಾರ್ಟಿ, ಸಂಗಡ, ಹೈಕಮಾಂಡ್ ಎಂಬುದನ್ನೂ ನೋಡದೇ ನೇರಾನೇರ ಹೇಳುವವರು. ಹೀಗಾಗಿ ರಮೇಶಕುಮಾರ್ ಅವರಿಗೆ ನಮ್ಮ ಸಾರ್ವಜನಿಕ ಜೀವನದಲ್ಲಿ ಒಂದು ಸ್ಥಾನಮಾನವಿದೆ, ಗೌರವವಿದೆ.

ಅಂಥ ರಮೇಶಕುಮಾರ್ ಮೊನ್ನೆ ಮೂಢನಂಬಿಕೆಯ ಪರಾಕಾಷ್ಠೆ ಪ್ರದರ್ಶಿಸಿ ನಗೆಪಾಟಲಿಗೆ ಈಡಾದರು. ಅಷ್ಟೇ ಅಲ್ಲ, ಇಷ್ಟು ದಿನ ನಾವು ಗೌರವಿಸಿದ, ಅಭಿಮಾನದಿಂದ ಕಂಡ ವ್ಯಕ್ತಿ ಇವರೇನಾ ಎಂದು ಅಚ್ಚರಿಪಡುವಂತೆ ವರ್ತಿಸಿದರು. ವಿಧಾನಸಭಾ ಚುನಾವಣೆಗಿಂತ ಮುನ್ನ ರಮೇಶಕುಮಾರ್ ಅವರು ಚಿಕ್ಕಮಗಳೂರು ಜಿಲ್ಲೆಯ ಗೌರಿಗದ್ದೆ ಎಂಬ ಊರಿನಲ್ಲಿ, ಇಪ್ಪತ್ತರ ಹರೆಯದಲ್ಲಿರುವ ವಿನಯ ಗುರೂಜೀ ಎಂಬಾತನನ್ನು ಭೇಟಿ ಮಾಡಿ, ಆತನ ಪಾದಪೂಜೆ ಮಾಡಿ, ಆತನಿಗೆ ಆರತಿ ಎತ್ತಿದರು. ಖಾಕಿ ಚೊಣ್ಣ ಧರಿಸಿದ ಈ 'ಬಾಲ ಗುರೂಜೀ ರಮೇಶಕುಮಾರ್ ಮಾಡಿದ ಪೂಜೆ ಹಾಗೂ ಸೇವೆಗೆ ಸಂತೃಪ್ತನಾಗುತ್ತಾನೆ. ರಮೇಶಕುಮಾರ್ ಅವರ ಬಲಗೈಯನ್ನು ಸೆಳೆದುಕೊಂಡ ಗುರೂಜೀ, ಹಸ್ತದ ಮೇಲೆ ಉಗುಳುತ್ತಾನೆ. ನೋಡಿದರೆ ಒಂದು ನಾಣ್ಯ!

ಇದರಿಂದ ಅತೀವ ಸಂತೃಪ್ತರಾಗುವ ರಮೇಶಕುಮಾರ್, ಆ ನಾಣ್ಯವನ್ನು ಕಣ್ಣಿಗೆ ಒತ್ತಿಕೊಂಡು, ಪಕ್ಕದಲ್ಲಿರುವವನಿಗೆ ಗುರೂಜಿ ಮಹಿಮೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ, ಅದನ್ನು ತಮ್ಮ ಅಂಗಿ ಕಿಸೆಯೊಳಗೆ ಇಟ್ಟುಕೊಳ್ಳುತ್ತಾರೆ. ಆನಂತರ ಗುರೂಜೀ ಕಾಲ ಬಳಿ ನೆಲದ ಮೇಲೆ ಕುಳಿತುಕೊಳ್ಳುವ ವಿವೇಕವಂತ ರಮೇಶಕುಮಾರ್, ಸ್ವಲ್ಪ ಹೊತ್ತು ಪಾದವನ್ನೇ ಹಿಡಿದುಕೊಂಡಿರುತ್ತಾರೆ. ನಂತರ ತನ್ನ ಕೈ ಒರೆಸಿಕೊಳ್ಳಲು ನ್ಯಾಪ್‌ಕಿನ್ ಕೊಡುತ್ತಾರೆ. ಈ ದೃಶ್ಯವುಳ್ಳ ವಿಡಿಯೋ ತುಣುಕನ್ನು ನೋಡಿದವರಿಗೆ, ಕೊನೆಯ ತನಕವೂ ನಾವು ನೋಡಿದ ರಮೇಶಕುಮಾರ್ ಇವರೇನಾ? ಇವರಿಗೇನು ಬಂತು ಬುದ್ಧಿ ನಷ್ಟಕಾಲ? ಪ್ರಾಯಶಃ ಇವರು ರಮೇಶಕುಮಾರ್ ಇರಲಿಕ್ಕಿಲ್ಲ ಎಂಬ ಅಭಿಪ್ರಾಯ ಬರದೇ ಹೋಗುವುದಿಲ್ಲ, ಕಾರಣ ಒಬ್ಬ ವಾಮಾಚಾರಿಯ ಮುಂದೆ ಕೀಲಿಕೊಟ್ಟ ಗೊಂಬೆಯಂತೆ ವರ್ತಿಸುವ ಅಂಧ, ಅವಿವೇಕಿ ಭಕ್ತನಂತೆ ರಮೇಶಕುಮಾರ್ ಗೋಚರಿಸುತ್ತಾರೆ. ಪುಣ್ಯವಶಾತ್, ಆ ಗುರೂಜೀ ಬಾಯಿಯಿಂದ ಉಗುಳಿ ನಾಣ್ಯ ಕೊಟ್ಟರು. ಒಂದು ವೇಳೆ ಬೇರೆ ರಂಧ್ರಗಳಿಂದ ಇನ್ನೇನನ್ನಾದರೂ 'ಪ್ರಸಾದ ಕೊಟ್ಟಿದ್ದಿದ್ದರೆ,' ಪ್ರಜ್ಞಾವಂತ ರಮೇಶಕುಮಾರ್ ಅವರು ಅದನ್ನೂ ಕಣ್ಣಿಗೆ ಒತ್ತಿಕೊಂಡು ಕಿಸೆಯೊಳಗಿಟ್ಟುಕೊಂಡು ಕೃತಾರ್ಥರಾಗುತ್ತಿದ್ದರೇನೋ?

ರಮೇಶಕುಮಾರ್ ಅವರಿಗೆ ನಾಚಿಕೆಯಾಗಬೇಕು. ಇಂಥ ಸೋಗಲಾಡಿತನವನ್ನು ಅವರು ಬಿಡಬೇಕು. ದೇವೇಗೌಡರೋ, ರೇವಣ್ಣನೋ, ಯಡಿಯೂರಪ್ಪನೋ ಈ ರೀತಿ ಮಾಡಿದ್ದರೆ ರಾಜ್ಯದ ಜನತೆ ಏನೂ ಅಂದುಕೊಳ್ಳುತ್ತಿರಲಿಲ್ಲ, ಕಾರಣ ಅವರು ಮೂಢನಂಬಿಕೆಗಳನ್ನು ಆರಾಧಿಸುವ ಮೂಢರು! ಯಡಿಯೂರಪ್ಪನವರು ಮೊದಲ ಬಾರಿಗೆ ಸಿಎಂ ಆದಾಗ, ತುಮಕೂರು ಬಳಿಯ ಸ್ವಾಮೀಜಿಯೊಬ್ಬ ಬಾಯಲ್ಲಿ ಅಕ್ಕಿಕಾಳು ಹಾಕಿ ಉಗುಳಿ, ಇದನ್ನು ಸಿಎಂ ಕುರ್ಚಿ ಮೇಲೆ ಇಟ್ಟು ಕುಳಿತುಕೋ ಎಂದು ಹೇಳಿದಾಗ ಅವರು ಶಿರಸಾವಹಿಸಿ ಮಾಡಿದ್ದರು. ಅಲ್ಲೂ ಪುಣ್ಯವಶಾತ್ ಅಕ್ಕಿಕಾಳು ಕೊಟ್ಟರು. ಬೇರೆ ಯಾವುದಾದರೂ 'ಪ್ರಸಾದ' ಕೊಟ್ಟಿದ್ದರೆ, ಯಡಿಯೂರಪ್ಪನವರು ದೂಸರಾ ಮಾತಾಡದೇ ಸ್ವಾಮೀಜಿ ಮಾತನ್ನು ನೆರವೇರಿಸುತ್ತಿದ್ದರು.

ಆಗ ಇದೇ ರಮೇಶಕುಮಾರ್ ಯಡಿಯೂರಪ್ಪನವರನ್ನು ಗೇಲಿಮಾಡಿದ್ದರು. 'ನಮ್ಮನ್ನು ಆಳುವವರು ಮತಿಗೇಡಿಗಳಾಗಬಾರದು, ಮೂಢನಂಬಿಕೆ ದಾಸರಾಗಬಾರದು. ಇದು ಸಮೂಹಪ್ರಜ್ಞೆಗೆ ಬಗೆದ ದ್ರೋಹ' ಎಂದು ರಮೇಶಕುಮಾರ್ ಕಟು ಟೀಕೆ ಮಾಡಿದ್ದರು. ಈಗ ಅದೇ ರಮೇಶಕುಮಾರ್ ಏನು ಮಾಡಿದರು? ಇದೂ ಸಮೂಹಪ್ರಜ್ಞೆಗೆ ಮಾಡಿದ ದ್ರೋಹವಲ್ಲವೇ? ಬುದ್ಧಿಯಿರುವವರು, ವಿವೇಕಶಾಲಿಗಳು, ವಿಚಾರವಂತರು ಮಾಡುವ ನಡೆಯಾ ಇದು? ರಮೇಶಕುಮಾರ್‌ರಿಗೆ ತಮ್ಮ ನಡೆಯಿಂದ, ಈ ಸಮಾಜವನ್ನು ತಾನು ದ್ವಾಪರಯುಗಕ್ಕೆ ಕರೆದೊಯ್ಯುತ್ತಿದ್ದೇನೆ ಎಂಬ ಕನಿಷ್ಠ ತಿಳಿವಳಿಕೆಯೂ ಇಲ್ಲದೇ ಹೋಯಿತಾ? ನಾಳೆ ಯಾವನೋ ನಕಲಿ ಬಾಬಾ, ಕಣ್ಣ ಸನ್ಯಾಸಿ, ವಂಚಕ ಗುರೂಜೀ, ತನ್ನ ಪಾದಪೂಜೆ ಮಾಡಿದ ನೀರನ್ನು ಕುಡಿ, ನೀರು ಮುಖ್ಯಮಂತ್ರಿಯಾಗ್ತೀಯಾ ಎಂದು ಹೇಳಿದರೆ ಈ ರಮೇಶಕುಮಾರ್ ಕುಡಿಯುತ್ತಾರಾ? ಹಾಗಾದರೆ ಈ ಪ್ರಜಾಪ್ರಭುತ್ವ, ಮತದಾರ ಪ್ರಭು, ಸಂವಿಧಾನ ಇವುಗಳಿಗೆಲ್ಲ ಏನು ಬೆಲೆ? ಎಲ್ಲರೂ ಪಾದಪೂಜೆಯನ್ನೇ ಮಾಡಬಹುದಲ್ಲ? ಉಗುಳಿದ ನಾಣ್ಯವನ್ನೇ ಜೇಬಿನಲ್ಲಿಟ್ಟುಕೊಂಡು ಗುರೂಜೀ ಪ್ರಸಾದ ಸ್ವೀಕರಿಸಿ ಬಯಸಿದ್ದನ್ನು ಪಡೆಯಬಹುದಲ್ಲ? ಹಾಗಾದರೆ ಮನುಷ್ಯ ಪ್ರಯತ್ನಕ್ಕೆ ಏನು ಬೆಲೆ? ಇದರಿಂದ ಸಮಾಜಕ್ಕೆ ತಾವು ಎಂಥ ಕೆಟ್ಟ ಸಂದೇಶ ಕಳಿಸುತ್ತಿದ್ದೇನೆ ಎಂಬುದರ ಅರಿವಾದರೂ ರಮೇಶಕುಮಾರ್ ಅವರಿಗೆ ಇದೆಯಾ? ಮಾತೆತ್ತಿದರೆ ಮಹಾಮೇಧಾವಿಯಂತೆ, ಪ್ರಾಜ್ಞರಂತೆ, ವಿಚಾರವಂತರಂತೆ ಮಾತಾಡುವ ರಮೇಶಕುಮಾರ್ ಅವರಿಗೆ ತಾನು ಮಾಡಿದ್ದು ಹಲ್ಕಾ ಕೆಲಸ ಎಂಬುದು ಗೊತ್ತಾಗಿಲ್ಲವಾ? ನಾಡಿನ ಜನತೆ ಈ ಬಗ್ಗೆ ಅವರನ್ನು ಟೀಕಿಸುತ್ತಿದ್ದರೂ ತಪ್ಪಾಯ್ತು ಎಂದು ಹೇಳುವ ಸೌಜನ್ಯವನ್ನೂ ಅವರು ತೋರಲಿಲ್ಲವಲ್ಲ?

ಸಿದ್ದರಾಮಯ್ಯನವರ ಸರಕಾರ ಮೂಢನಂಬಿಕೆ ವಿರೋಧಿ ವಿಧೇಯಕ ಮಂಡಿಸಿದಾಗ, ಇದೇ ರಮೇಶಕುಮಾರ್ ಅದನ್ನು ಬೆಂಬಲಿಸಿದ್ದರು. ಮೂಢನಂಬಿಕೆ ಬಗ್ಗೆ ತಮ್ಮ ವಿಚಾರಧಾರೆ ಹರಿಯಬಿಟ್ಟಿದ್ದರು. ಈಗ ಅದೇ ರಮೇಶಕುಮಾರ್ ಮೂಢನಂಬಿಕೆ ಆರಾಧಿಸುವ ಪರಾಕಾಷ್ಠೆ ಪ್ರದರ್ಶಿಸಿದ್ದಾರೆ. ಅಂದರೆ ಇವರು ಹೇಳುವುದು ಶಾಸ್ತ್ರ, ತಿನ್ನುವುದು ಬದನೆಕಾಯಿ ಎಂದಂತಾಯಿತು. ಅಂದರೆ ಇವರ ಮಾತಿಗೂ, ಕೃತಿಗೂ ಸಂಬಂಧ ಇಲ್ಲ ಎಂದಂತಾಯಿತು. ಪ್ರಾಯಶಃ ತಾನು ಮಾಡಿದ 'ಪಾದಪೂಜೆ ಬೇರೆ ಯಾರಿಗೂ ಗೊತ್ತಾಗುವುದಿಲ್ಲ' ಎಂದೇ ಅವರು ಭಾವಿಸಿದ್ದಿರಬೇಕು. ಈ ರೀತಿ ಬೇರೆಯವರಿಗೆ ಗೊತ್ತಾಗದಂತೆ, ಗೊತ್ತಾಗುವುದಿಲ್ಲ ಎಂದು ಭಾವಿಸಿ ಏನೇನು ಮಹಾಕಾರ್ಯಗಳನ್ನು ಮಾಡಿದ್ದಾರೋ ಯಾರಿಗೆ ಗೊತ್ತು? ತಾವು ಆಡುವ ಮಾತುಗಳನ್ನು ಬೇರೆಯವರು ಪಾಲಿಸಬೇಕು. ತಾವು ಮಾತ್ರ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಹುದು ಎಂದು ಅವರು ಭಾವಿಸಿರಬೇಕು. ಇದು ಅತ್ಯಂತ ಅಪಾಯಕಾರಿ ಚಿಂತನಾ ಪ್ರವೃತ್ತಿ.

ಅಮಾಯಕ ಗುರೂಜೀ ಕಾಲಿಗೆರಗಿ ಪೂಜೆ ಮಾಡಿ ಹಣೆಯಿಟ್ಟು ಮೌಢ್ಯ ಮೆರೆಯುವ ರಮೇಶಕುಮಾರ್ ಅವರಂಥವರಿಗಾಗಿ ಇಂಗ್ಲಿಷಿನಲ್ಲಿ ಒಂದು ಮಾತಿದೆ. "If you know less and less, you believe more and more'. ರಮೇಶಕುಮಾರ್ ಅವರ ಮಟ್ಟ ಇಷ್ಟೇನಾ? ಪಾದಕ್ಕಿಂತ ಮೇಲೆ ಬಂದಿಲ್ಲವಾ?



ರಮೇಶಕುಮಾರ್ ಅವರು ಯಾಕೋ ಗೆಂಡೆತಿಮ್ಮನಾಗಿದ್ದರೆ, ಯಂಕನೋ, ನಾಣಿಯೋ ಆಗಿದ್ದಿದ್ದರೆ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಹಾಗೆಂದು ಅವರು ಇದು ತನ್ನ ವೈಯಕ್ತಿಕ ಅಥವಾ ಖಾಸಗಿ ವಿಷಯ ಎಂದು ಹೇಳಿ ನುಣುಚಿಕೊಳ್ಳಲು ಆಗುವುದಿಲ್ಲ. ಹಾಗೆ ನೋಡಿದರೆ, ಅಧಿಕಾರದಲ್ಲಿರುವವರಿಗೆ, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವವರಿಗೆ ಖಾಸಗಿ ಹಾಗೂ ಸಾರ್ವಜನಿಕ ಎಂಬುದಿರುವುದಿಲ್ಲ. ಖಾಸಗಿಯಾಗಿ ಹಲ್ಕಾ ಕೆಲಸ ಮಾಡಿದರೆ, ಸಾರ್ವಜನಿಕವಾಗಿ ಮಾಫು ಮಾಡಬೇಕೆಂದು ಹೇಳಲಾಗುವುದಿಲ್ಲ, ಉನ್ನತಸ್ಥರದಲ್ಲಿರುವವರು ಸಮಾಜಕ್ಕೆ ಮೇಲ್ಪಂಕ್ತಿ ಹಾಕಿಕೊಂಡಿರುತ್ತಾರೆ. ಅವರನ್ನು ನೋಡಿ ಸಮಾಜ ತನ್ನ ಪಾತಳಿ ಬದಲಿಸುತ್ತದೆ. ಈ ಸೂಕ್ಷ್ಮ ಸಂಗತಿ ರಮೇಶಕುಮಾರ್‌ಂಥವರಿಗೆ ತಿಳಿಯದ ಸಂಗತಿಯೇನಲ್ಲ, ಅವರಿಗೆ ಈ ವಿಷಯದಲ್ಲಿ, ತಿಳಿಯುವ ಸಂಗತಿಯೇನೆಂದರೆ, ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಬೇರೆಯವರಿಗೆ ಗೊತ್ತಾಗುವುದಿಲ್ಲ ಎಂಬುದು.

ನರಸಿಂಹರಾಯರು ಪ್ರಧಾನಿಯಾಗಿದ್ದಾಗ ಚಂದ್ರಸ್ವಾಮಿಯಂಥ ಪಕ್ಕಾ 420ಯನ್ನು ಆಗಾಗ ಭೇಟಿ ಮಾಡಿ, ಅವರ ಕಾಲಿಗೆ ಎರಗಿ ಬರುತ್ತಿದ್ದರು. ಆ ಸ್ವಾಮಿ ಒಂದು ದಿನ ರಾಯರಿಗೆ 'ನನ್ನ ಫೋಟೋವನ್ನು ನಿಮ್ಮ ಮನೆಯ ಜಗುಲಿ ಗೋಡೆಗೆ ತಗುಲಿ ಹಾಕಿ ಎಂದು ತನಗೆ ಕನಸಿನಲ್ಲಿ ಅಪ್ಪಣೆಯಾಗಿದೆ'ಯೆಂದು ತಿಳಿಸಿದ. ರಾಯರು ಸ್ವಾಮಿಯ ಅಪ್ಪಣೆಯನ್ನು ಶಿರಸಾವಹಿಸಿ ಪಾಲಿಸಿದರು. ರಾಯರು ತಮ್ಮ ಮನೆಯಲ್ಲಿ ಕುಳಿತುಕೊಳ್ಳುವ ಕುರ್ಚಿಯ ಹಿಂಬದಿಗೆ ಈ ಕಳ್ಳಸ್ವಾಮಿ ಫೋಟೋ! ಯಾವ ಆ್ಯಂಗಲ್‌ನಿಂದ ರಾಯರ ಫೋಟೋ ತೆಗೆದರೂ, ಸ್ವಾಮಿಯ ಫೋಟೋ ಹಿನ್ನೆಲೆಯಲ್ಲಿ ಕಾಣಿಸುತ್ತಿತ್ತು. ನರಸಿಂಹರಾಯರಂಥ ಪ್ರಾಜ್ಞರು, ಮೇಧಾವಿಗಳು, ವಿದ್ವಾಂಸರು ಈ ಕಳ್ಳ ಸ್ವಾಮೀಗಳ ಹುನ್ನಾರಕ್ಕೆ ಬಲಿಯಾಗಿದ್ದರು.

ದೇಶದ ಪ್ರಧಾನಿ ಗೋಡೆಯ ಮೇಲಿನ ಫೋಟೋ ನೋಡಿದ ಜನತೆ, ಚಂದ್ರಸ್ವಾಮಿಯ ಮನೆಮುಂದೆ ಜಮಾಯಿಸಲಾರಂಭಿಸಿದರು. ಒಳ್ಳೆಯ ಹುದ್ದೆ, ವರ್ಗಾವಣೆ ಬಯಸಿ ಬರುವ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಲಾರಂಭಿಸಿತು. ಕೆಲವು ದಿನಗಳಲ್ಲಿ ಸ್ವಾಮಿಯ ಖದರು, ಖ್ಯಾತಿ, ಕೈಫಿಯತ್ತು ಬದಲಾಗಿ ಹೋಯಿತು. ದಿಲ್ಲಿ ಸರಕಾರ ಸ್ವಾಮಿಗೆ ಹತ್ತಾರು ಎಕರೆ ಭೂಮಿ ನೀಡಿತು. ಈ ಸ್ವಾಮಿ ಅಲ್ಲಿ ವೈಭವಯುತವಾದ ಆಶ್ರಮ ಕಟ್ಟಿದ. ಪ್ರಧಾನಿಯನ್ನು ಭೇಟಿ ಮಾಡುವವರು ಈ ಆಶ್ರಮ ತುಳಿದು ಬರುತ್ತಿದ್ದರು. ಸ್ವಾಮಿಯ ಆಶ್ರಮ ಪ್ರಧಾನಿ ಕಾರ್ಯಾಲಯದ ಅಂಗವಾಯಿತು. ಈ ಪಡಪೋಶಿ ಸ್ವಾಮಿ ಮಾಡಬಾರದ ಅವಾಂತರಗಳನ್ನೆಲ್ಲ ಮಾಡಿದ, ತಾನೂ ಕೆಟ್ಟ, ರಾಯರ ಹೆಸರನ್ನೂ ಕೆಡಿಸಿದ. ಸಿಬಿಐ ಈತನನ್ನು ಅರೆಸ್ಟ್ ಮಾಡಿತು. ಅದಕ್ಕೂ ಮುನ್ನ ಈತ ತಲೆಮರೆಸಿಕೊಂಡಿದ್ದ.

ನರಸಿಂಹರಾಯರ ಅಂಧಭಕ್ತಿ ಈ ಸ್ವಾಮಿಯ ಗ್ರಹಗತಿಯನ್ನೇ ಬದಲಾಯಿಸಿತು. ಒಬ್ಬ ಸಾಮಾನ್ಯ ವ್ಯಕ್ತಿ ದಿಲ್ಲಿ ಅಧಿಕಾರವಲಯದಲ್ಲಿ ಪ್ರಭಾವಿ ವ್ಯಕ್ತಿಯಾಗಿ ಮೆರೆಯುವಂತೆ ಮಾಡಿತು. ಪ್ರಧಾನಿ ನಿವಾಸದಲ್ಲಿ ಒಂದು ಫೋಟೋ ತಗುಲಿ ಹಾಕಿಸಿಕೊಂಡು ಎಲ್ಲರನ್ನೂ ತನ್ನ ಅಣತಿಯಂತೆ ನೇತಾಡುವಂತೆ ಮಾಡಿದ. ಅಧಿಕಾರದಲ್ಲಿರುವವರು, ಪ್ರಮುಖ ಸ್ಥಾನದಲ್ಲಿರುವವರು ಬೇರೆಯವರ 'ಪಾದಾರವಿಂದಗಳಿಗೆ ಹಣೆ ಹಚ್ಚುವ ಮುನ್ನ ಯೋಚಿಸಬೇಕು. ತನ್ನ ನಂಬಿಕೆ ಇಡೀ ಸಮಾಜಕ್ಕೆ ಪರಮ ಘಾತಕವಾಗಿ ಪರಿಣಮಿಸಬಹುದು ಎಂಬ ಎಚ್ಚರವಿರಬೇಕು. ಹಾಗೆಂದು ಸ್ವಾಮೀಜಿಗಳು, ಗುರೂಜೀಗಳ ಬಗ್ಗೆ ಗೌರವ ಇಟ್ಟುಕೊಳ್ಳಬಾರದು ಎಂದಲ್ಲ. ಇಟ್ಟುಕೊಳ್ಳಲಿ, ಆದರೆ ಬುದ್ಧಿಯನ್ನು ಯಾರದ್ದೋ ಕಾಲಿನ ಬುಡದಲ್ಲಿ ಇಡಬಾರದು.

ಈ ಅಧಿಕಾರದಲ್ಲಿರುವವರು, ಅಧಿಕಾರಕ್ಕೇರಬೇಕೆನ್ನುವವರು ಮಾಡಬಾರದ ಹಲ್ಕಾ ಕೆಲಸಗಳನ್ನು ಮಾಡಿರುತ್ತಾರೆ. ಹೀಗಾಗಿ ಅವರ ಮನಸ್ಸಿನೊಳಗೆ ಸದಾ ಆತಂಕ, ಭಯ ಮನೆ ಮಾಡಿರುತ್ತದೆ. ಪಾಪಪ್ರಜ್ಞೆ ಕಾಡುತ್ತಿರುತ್ತದೆ. ಇವುಗಳಿಂದ ಪಾರಾಗಲು ದೇವರು, ಸ್ವಾಮೀಜಿ, ಗುರೂಜಿಗಳ ಮೊರೆ ಹೋಗುತ್ತಾರೆ. ಇವರ ಅಸಲಿಯತ್ತು ಸ್ವಾಮೀಜಿಗಳಿಗೆ ಗೊತ್ತಿರುತ್ತದೆ. ಇವರು ತಾವು ಏನೇ ಹೇಳಿದರೂ ಮಾಡುತ್ತಾರೆಂಬುದು ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ಕಾರಣ ಆ ಪ್ರಮಾಣದ ಪಾಪಕಾರ್ಯ ಮಾಡಿ ಅಲ್ಲಿಗೆ ಬಂದಿರುತ್ತಾರೆ. ಸ್ವಾಮೀಜಿ ಏನೇ ಹೇಳಿದರೂ, ಮಂಗನಾಡಿಸುವವ ಏನೇ ಹೇಳಿದರೂ ಕೋತಿ ಕೇಳುತ್ತದಲ್ಲ, ಅದೇ ರೀತಿ ವರ್ತಿಸುತ್ತಾರೆ.

ನಮ್ಮ ರಮೇಶಕುಮಾರ್ ಅವರು ಮಾಡಿದ್ದೂ ಅದೇ. ಅವರು ಅದ್ಯಾವ ಪಾಪಕಾರ್ಯಗಳಿಂದ ಬಳಲುತ್ತಿದ್ದರೋ. ಯಾವ ಕನಸು, ಕನವರಿಕೆಗಳನ್ನು ಇಟ್ಟುಕೊಂಡು ತೊಳಲಾಡುತ್ತಿದ್ದಾರೋ, ಆ ಬಾಲಗುರೂಜೀಗೇ ಗೊತ್ತು. ಸೀದಾ ಹೋಗಿ ಹಣೆ ಹಚ್ಚಿ ಬಂದರು. ಅದರಿಂದ ಅವರಿಗೆ ತಾನೆಂಥ ಘೋರ ಪಾಪ ಮಾಡಿದೆ ಎಂಬುದೂ ಗೊತ್ತಾಗಲಿಲ್ಲವಲ್ಲ, ಅದು ಕರ್ಮ, ಕರ್ಮ! ರಮೇಶಕುಮಾರ್ ಕನಿಷ್ಠ ಒಂದು ಕ್ಷಮೆ, ಹೋಗಲಿ ಒಂದು ಸ್ಪಷ್ಟನೆ, ಸಮರ್ಥನೆಯನ್ನಾದರೂ ನೀಡಬಹುದಿತ್ತು. ಅದನ್ನೂ ಮಾಡಲಿಲ್ಲ, ಅಂದರೆ ಅವರಿಗೆ ಸ್ವಲ್ಪವೂ ಪಶ್ಚಾತ್ತಾಪವಾಗಿಲ್ಲವೆಂದಂತಾಯಿತು. ಸರಿ, ತಾನು ಮಾಡಿದ್ದು ಘನಕಾರ್ಯ ಎಂದಾದರೂ ಸಮರ್ಥನೆ ಮಾಡಿಕೊಳ್ಳಲಿ ನೋಡೋಣ.

ರಮೇಶಕುಮಾರ್ ಅವರ ಅಧಿನಾಯಕಿ ಇಂದಿರಾಗಾಂಧಿ ಸಹ ಧೀರೇಂದ್ರ ಬ್ರಹ್ಮಚಾರಿ ಎಂಬ ಪಡಪೋಶಿಯ ಕಾಲಿಗೆರಗಿ ವಿವಾದ ಎಳೆದುಕೊಂಡಿದ್ದರೆಂಬುದನ್ನೂ ಅವರು ಮರೆಯಬಾರದಿತ್ತು. ಕಾಲಿಗೆರಗಿ ನಮಿಸುವುದು ತಪ್ಪಲ್ಲ. ಅದು ನಮ್ಮ ಸಂಸ್ಕೃತಿ. ಹಿರಿಯರಿಗೆ ಕಾಲಿಗೆರಗುವುದು ನಮ್ಮ ಉದಾತ್ತ ಸಂಪ್ರದಾಯ. ಆದರೆ ನಾವು ಕಾಲಿಗೆರಗುವವರು ಯಾರು, ಅವರ ಸಾಚಾತನ ಏನೆಂಬುದು ನಮಗೆ ಗೊತ್ತಿರಬೇಕು. ಅಲ್ಲದೇ ನಮ್ಮ ಈ ನಡೆಯಿಂದ ಸಮಾಜಕ್ಕೆ ಯಾವ ಸಂದೇಶ ಹೋಗುತ್ತಿದೆಯೆಂಬುದೂ ತಿಳಿದಿರಬೇಕು. ಇದು ತಮ್ಮ ಖಾಸಗಿ ವಿಷಯವೆಂದು ಸಾರ್ವಜನಿಕವಾಗಿ ಬೆತ್ತಲಾಗಬಾರದು.

# ಬೆಳಗಾವಿಯ ಕುಂದ ಹಾಸ್ಯ ಕೂಟವೆಂಬ ಕಂದ



ಪ್ರಾಣೇಶ್ ಪ್ರಪಂಚ

ಗಂಗಾವತಿ ಪ್ರಾಣೇಶ್

editoped@vishwavani.news

ನಾನು ನಗಿಸಲು ಶುರುಮಾಡಿದ ಘಳಿಗೆ ಚೆನ್ನಾಗಿದೆಯೇನೋ. ಸಾಕು ಸಾಕೆನಿಸುವಷ್ಟು ಕಾರ್ಯಕ್ರಮ, ರೋಸಿಹೋಗುವಷ್ಟು ಜನಪ್ರಿಯತೆ, ನಾನೇ ಉರಿದು ಬೀಳುವಷ್ಟು ಟಿ.ವಿಯಲ್ಲಿ ಮೇಲಿಂದ ಮೇಲೆ ನನ್ನ ಮಾತು ಮುಖಗಳ ಪ್ರಸಾರದಿಂದಾಗಿ(ನನಗೇ ಉರಿದು ಬೀಳುವಂತಾಗಿದೆ ಎಂದರೆ ನನ್ನನ್ನು ಕಂಡರೆ ಆಗದವರಿಗೆ ಅದೆಷ್ಟು ಉರಿದು ಬೀಳುವಂತಾಗಿರ ಬೇಡ ಪಾಪ!) ನನಗೆ ಶುರು ಮಾಡಿದ ಟೈಮ್, ಘಳಿಗೆ ಬಗ್ಗೆ ಕುತೂಹಲವಾಗಿದೆ. ಯಾವ ಜ್ಯೋತಿಷಿಯೂ ತೆಗೆದು ಹೇಳಿದ ವೇಳೆ, ಮುಹೂರ್ತ ಅದಲ್ಲ, ಹೀಗೆ ಆದರೆ ಹೇಗೆ ಎಂಬ ಹತಾಶ ಘಳಿಗೆ ಅದು 8-12-1994. ಮೊದಲ ಹಾಸ್ಯಸಂಜೆ, ನನ್ನೂರು ಗಂಗಾವತಿಯ ರಾಯರ ಓಣಿಯಲ್ಲಿರುವ ಪುಟ್ಟ ಜ್ಞಾನಮಂದಿರ ಎಂಬ ಐವತ್ತು ಅರವತ್ತು ಜನರು ಸೇರದ ಸಭೆ. ಸಂದರ್ಭ ಬೀಚಿಯವರ ಪುಣ್ಯ ತಿಥಿ ಆಚರಣೆ, ಅವರ ಪುಸ್ತಕ ಮುಂದಿಟ್ಟುಕೊಂಡೇ ಅದರಲ್ಲಿನ ಸ್ವಾರಸ್ಯ ಪ್ರಸಂಗಗಳನ್ನೆ ಓದುತ್ತಿದ್ದೆ ಅಷ್ಟೆ. ಕತ್ತೆತ್ತಿ ಜನರನ್ನು ನೋಡಿದರೆ ಸಭಾ ಕಂಪ, ನಾಲಿಗೆ ಒಣಗುತ್ತಿತ್ತು. ಆಗ ವರ್ಷಕ್ಕೆ ಐದೋ, ಆರೋ ಕಾರ್ಯಕ್ರಮಗಳಷ್ಟೆ 'ನೀವು ಬಾಯ್ಲಲೇ ಹೇಳ್ರಿ ಓದೋದಾದ್ರೆ ನಾವೇ ಓದಿಕೋತೀವಿ, ಅದಕ್ಕ ನೀವ್ಯಾಕೆ?' ಎಂದು ಜನ ಛೇಡಿಸಲಾರಂಭಿಸಿದರು. ಓದಿಕೊಂಡು, ಕಂಠಪಾಠಮಾಡಿ ಹೇಳಲಾರಂಭಿಸಿದೆ, ಹೀಗೆ ಕೆಲವರ್ಷ ನಡೆಯಿತು. ಗಂಗಾವತಿ ಸುತ್ತಮುತ್ತ ಊರುಗಳ–ಹಳ್ಳಿಗಳಿಂದ ಸಣ್ಣಗೆ ಕರೆ ಶುರುವಾದವು, ನಾನೇ ಸಾಹಿತ್ಯ ಬಳಗದವತಿಯಿಂದ ಬೀಚಿ ಪುಣ್ಯ ತಿಥಿ ಆಚರಿಸುತ್ತಿದ್ದೆ. ಇದನ್ನು ನೋಡಿ ಜೆ.ಕೆ.ಶ್ರೀನಿವಾಸ ಸಿಂಧನೂರಲ್ಲಿ ಬೀಚಿ ಬಳಗ ಕಟ್ಟಿದರು. ಅದರ ಉದ್ಘಾಟನೆಗೆ ಬೆಳಗಾವಿಯ ಖ್ಯಾತ ಹಾಸ್ಯ ಸಾಹಿತಿ ಅನಂತ ಕಲ್ಲೋಳ್‌ರನ್ನು ಕರೆಸಿದರು. ಅವರ ಅಧ್ಯಕತೆಯಲ್ಲಿ ನಾನು ಮುಖ್ಯ ಅತಿಥಿ ಅದು 7-4-1996. ಅಲ್ಲಿ ನನ್ನ ಮಾತು ಕೇಳಿದ ಅನಂತ ಕಲ್ಲೋಳರು ರಾಜ್ಯೋತ್ಸವ ಕಾರ್ಯಕ್ರಮದ ಅತಿಥಿಯಾಗಿ ಬೆಳಗಾವಿಯ ಕ್ರಿಯಾಶೀಲ ಬಳಗ ಸಂಸ್ಥೆಯವರಿಗೆ ನನ್ನನ್ನು ಕರೆಸಲು ಸೂಚಿಸಿ ಅದರಂತೆ 1-11-1996 ರಂದು ಮೊದಲ ಬಾರಿಗೆ ಬೆಳಗಾವಿಗೆ ಕಾಲಿಟ್ಟೆ.

ಇದು ಸಣ್ಣಮಾತಲ್ಲ, ಹಿರಿಯ ಸಾಹಿತಿ ಶ್ರೀಅನಂತ ಕಲ್ಲೋಳ ತಾವು ಮಾತುಗಾರರಾಗಿದ್ದರೂ ನನ್ನಂಥ ಕಿರಿಯನನ್ನು ಅಲ್ಲಿಗೆ ಕರೆಸಿಕೊಂಡರು ನನ್ನನ್ನು ಹೊಗಳಿ, ಹುರಿದುಂಬಿಸಿ ಮಾತನಾಡಲು ಬೆಳಗಾವಿ ಜನರ ಮುಂದೆ ನಿಲ್ಲಿಸಿದರು. ಮರಾಠಿ ಹಾಸ್ಯ ಕೇಳಿದ ಬೆಳಗಾವಿ ಜನ, ಕಥಾಕಥನ ಎಂಬ ಶೈಲಿ ಮಾತುಗಾರರನ್ನು ಕಂಡಿದ್ದ ಬೆಳಗಾವಿ ಜನ ನನ್ನ ಬೀಚಿಯವರ ವಿಚಾರಗಳಿಗೂ ಬಿದ್ದು ಬಿದ್ದು ನಕ್ಕರು. ಬೀಚಿ ಸಾಹಿತ್ಯದ ಹೂರಣವಿಲ್ಲದಿದ್ದರೆ ನನ್ನ ಮಾತುಗಳು ಬೆಳಗಾವಿಗೆ ನಾನು ಇಲ್ಲಿಯವರೆಗೂ ಐವತ್ತು ಬಾರಿ ಹೋಗಲು ನನ್ನ ಕಾಲಿಗೆ, ನಾಲಿಗೆಗೆ ಶಕ್ತಿ ತುಂಬುತ್ತಿರಲಿಲ್ಲ, ಬೀಚಿ ಸಾಹಿತ್ಯ, ಕಲ್ಲೋಳರ ಸ್ನೇಹಪರತೆ ನನ್ನನ್ನು ಇಂದಿನವರೆಗೂ ಬೆಳಗಾವಿ ಹಾಸ್ಯ ಪ್ರಿಯರ ಹೃದಯ ಸಿಂಹಾಸನದಲ್ಲಿ ನೆಲೆಯೂರಿಸಿವೆ. ಆ ಮೇಲೆ ಬಿ.ಎಸ್.ಗವಿಮಠ, ಜಿನದತ್ತ ದೇಸಾಯಿ, ಕೆಎಲ್‌ಇ ಸಂಸ್ಥೆಗಳು, ಗೋಗಟೆ ಕಾಲೇಜಿನ ಡಾ. ಡಿ.ಎಚ್.ರಾವ್, ಹಲವಾರು ಹಿರಿಯರು ಕರೆಸಿ ಕರೆಸಿ ಕೇಳಿ ಹಿಗ್ಗಿದರು.

13-04-2001ರಲ್ಲಿ ತಲೆಬೇಕು ಪುಸ್ತಕ ಬಿಡುಗಡೆಗೆ ಕರೆಸಿದವರೇ ಈ ವಾರದ ಲೇಖನದ ಕಥಾನಾಯಕ. ಶ್ರೀಗುಂಡೇನಟ್ಟಿ ಮಧುಕರ್ ಇವರ ನನ್ನ ಸ್ನೇಹ ಸರಿ ಸುಮಾರು 20 ವರ್ಷದ್ದು. ಸ್ನೇಹಜೀವಿ, ಸರಳತೆ, ಮೆದುಮಾತು, ಕೇವಲ ಸೌಜನ್ಯದಿಂದಲೇ ಕಾರ್ಯಕ್ರಮಗಳಿಗೆ ಒಪ್ಪಿಸಿ ಅದ್ಭುತ ಪ್ರೇಕ್ಷಕರನ್ನು ಸೇರಿಸಿ ಸ್ಮರಣೀಯ ಕಾರ್ಯಕ್ರಮಗಳನ್ನು ಅತಿಥಿಗಳಿಗೆ ಕೊಡಿಸುವ ಕುಶಲಿ ಸಂಘಟಕ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಬೆಳಗಾವಿಯಲ್ಲಿ ಗುಂಡೇನಟ್ಟಿ ಎಂದರೆ ಕಡಿಮೆ ಬಜೆಟ್ಟಿನಲ್ಲಿ ರಾಷ್ಟ್ರಪ್ರಶಸ್ತಿ ಪಡೆಯುವಂಥ, ಬ್ಲಾಕ್ ಆ್ಯಂಡ್ ವೈಟ್ ಸಿನಿಮಾ ತೆಗೆಯುವ ನಿರ್ಮಾಪಕ ಕಂ ನಿರ್ದೇಶಕ ಇದ್ದಂತೆ. ನಾಗತಿಹಳ್ಳಿ ಚಂದ್ರಶೇಖರ, ಗಿರೀಶ್ ಕಾಸರವಳ್ಳಿ, ಸತ್ಯು, ಪುಟ್ಟಣ್ಣಕಣಗಾಲರ ಗುಂಪಿಗೆ ಸೇರಿಸುವಂಥವರು. ಒಬ್ಬ ನಟ ರಾಷ್ಟ್ರ ಪ್ರಶಸ್ತಿ ಸಿನಿಮಾದಲ್ಲಿ ನಟಿಸಿ ಪ್ರಶಸ್ತಿ ಪಡೆದನೆಂದರೆ ಹೇಗೆ ಆಮೇಲೆ ಕಲರ್ ಸಿನಿಮಾಗಳಲ್ಲಿ, ಗ್ಲಾಮರ್ ಸಿನಿಮಾಗಳಲ್ಲಿ ಖ್ಯಾತನಾಗುತ್ತಾನೆಯೋ ಹಾಗೆಯೇ ಪಂಢರಿಬಾಯಿ ಜತೆ ಬೇಡರ ಕಣ್ಣಪ್ಪ ಮಾಡಿದ ರಾಜಕುಮಾರ ಮುಂದೆ ಹಿಂದಿ ನಟಿಯರಾದ ರೇಖಾ, ಜ್ಯೂಲಿಲಕ್ಷ್ಮೀ ಹಾಗೂ ಜಮುನಾ, ಪದ್ಮಪ್ರಿಯಾ ರಂಥ ನಟಿಯರ ಜತೆ ಮಿಂಚಲಿಲ್ಲವೇ? ಅಂಥ ಯೋಗವನ್ನು ಸಾಹಿತಿಗಳಿಗೆ ಸಾಹಿತ್ಯಿಕ ರಂಗದಲ್ಲಿ ಕೊಡುವ ನಿರ್ದೇಶಕ–ನಿರ್ಮಾಪಕ ಶ್ರೀ ಗುಂಡೇನಟ್ಟಿ ಮಧುಕರ್. ನನಗೂ ಇದೇ ಅನುಭವವೇ. ಇವರು ಏರ್ಪಡಿಸಿದ ಮೊದಲ ನನ್ನ ಕಾರ್ಯಕ್ರಮ ಪುಟ್ಟದಾದ ಸಾಹಿತ್ಯ ಭವನದಲ್ಲಿ ಅಲ್ಲಿಂದ ಮುಂದೆ ಬೆಳಗಾವಿಯ ಜೀರಿಗೆ ಸಭಾಂಗಣದಂತಹ ಸಭೆಗಳಲ್ಲಿಯೇ ನಾನು ಹಲವಾರು ಕಾರ್ಯಕ್ರಮಗಳನ್ನು ಕೊಟ್ಟೆ.

ನನಗೂ ಇವರಿಗೂ ಇರುವ ಸಮಾನ ಅಭಿರುಚಿ ಎಂದರೆ ಇವರು ಬೀಚಿಯವರ ಅಪ್ಪಟ ಅಭಿಮಾನಿ. ಬೆಳಗಾವಿಯ ತಮ್ಮ ಮನೆಯ ಮುಂದೆ ಇವರು ಜೀವನೋಪಾಕ್ಕಾಗಿ ನಡೆಸುತ್ತಿದ್ದ ಎಸ್ .ಟಿ.ಡಿ. ಬೂತ್‌ಗೆ ಬೀಚಿ ಡಾಯಲಿಂಗ್ ಸೆಂಟರ್ ಎಂದು ಹೆಸರಿಟ್ಟಿದ್ದರು. ಪ್ರಾರಂಭದ ದಿನಗಳಲ್ಲಿ ಇವರ ಮನೆಯಲ್ಲಿಯೇ ನಾನು ಉಳಿದು ಕೊಂಡದ್ದೂ ಉಂಟು. ಸಣ್ಣ ಉದ್ಯೋಗದಲ್ಲಿದ್ದರೂ ತಮ್ಮ ನಯ ವಿನಯಗಳಿಂದ ಅಪಾರ ಸಾಹಿತ್ಯ ಆಸಕ್ತರನ್ನು ಕಲೆಹಾಕಿ ಸಂಘಟನೆ ಕಟ್ಟಿ ಬೆಳಗಾವಿಯಲ್ಲಿ ಕನ್ನಡದ ಉಳಿವಿಗಾಗಿ ಗುಂಡೇನಟ್ಟಿ ಇಂದಿಗೂ ಅಹರ್ನಿಶಿ ದುಡಿಯುತ್ತಿದ್ದಾರೆ. ಭುವನೇಶ್ವರಿ ಹೆಗಡೆ, ಡುಂಢಿರಾಜ್, ನಟ ವಿಷ್ಣುವರ್ಧನ್ ನಂಥವರಿಂದ ಹಿಡಿದು ನನ್ನಂಥವನವರೆಗೂ ಆದರ, ಆತಿಥ್ಯ, ಸ್ಥಳೀಯ ಪತ್ರಿಕೆಗಳಿಗೆ ಸಂದರ್ಶನ, ವೇಣುಧ್ವನಿ ಎಂಬ ಸಮುದಾಯ ಬಾನುಲಿ ಕೇಂದ್ರಕ್ಕೊಂದು ಮಾತುಕತೆ ಮಾಡುತ್ತಾ ಬಂದಿದ್ದಾರೆ.

ಇವೆಲ್ಲರ ಫಲವಾಗಿ ಹಾಸ್ಯಕೂಟ ಎಂಬ ಸಂಘಟನೆಯೊಂದನ್ನು ಆರಂಭಿಸಿದ್ದಾರೆ. ಹಿರಿಯ ಪತ್ರಕರ್ತ ಎಲ್.ಎನ್ ಶಾಸ್ತ್ರಿಯವರೇ, ಬೀಚಿಯವರ ದಾಸಕೂಟ ಕಾದಂಬರಿ ಪ್ರೇರಣೆಯಿಂದಾಗಿ ಇದಕ್ಕೆ ನಗೆಕೂಟ ಎಂದು ನಾಮಕರಣ ಮಾಡಿದ್ದಾರೆ. ಈಗಾಗಲೇ ಐವತ್ತರ ಮೇಲ್ಪಟ್ಟು ಕಾರ್ಯಕ್ರಮ, ಹತ್ತಿರ ಹತ್ತಿರ ಐದನೆಯ ವರ್ಷಕ್ಕೆ ಕಾಲಿಡುತ್ತಿದೆ. ಇದರ ಹಿಂದೆ ಪ್ರೊ. ಜಿ.ಕೆ.ಕುಲಕರ್ಣಿ, ಅಶೋಕ ಮಳಗಲಿ ಅರವಿಂದ ಹುನಗುಂದ, ಹೀಗೆ ಹಾಸ್ಯಪ್ರಿಯ ಉತ್ಸಾಹಿ ಹಿರಿಯರ ತಂಡವೇ ಇದೆ. 2014ರ ಏಪ್ರಿಲ್ 12 ರಂದು ಆರಂಭವಾಗಿರುವ ಈ ನಗೆ ಕೂಟ ಸ್ಥಳೀಯ ಹಾಗೂ ಬೆಳಗಾವಿಯ ಗ್ರಾಮಾಂತರ ಕವಿ, ಲೇಖಕ, ಸಾಹಿತಿಗಳಿಗೆ ತಾಲಿಮಿನ ಕೇಂದ್ರವಾಗುತ್ತಿದೆ. ಪ್ರತಿ ತಿಂಗಳ ಎರಡನೆ ಶನಿವಾರ ಒಂದೊಂದು ವಿಷಯ ಚರ್ಚಿಸುವ ಈ ಸಹೃದಯ ಸತ್ಸಂಗಿಗಳು ವಿಷಯದ ಆಯ್ಕೆಯಲ್ಲೂ ಜಾಣತನ, ವಿಟ್ ಆ್ಯಂಡ್ ವಿಸ್‌ಡಂ ಸೇರಿಸುವ ಆಕರ್ಷಕ ಶೀರ್ಷಿಕೆ ಕೊಟ್ಟು ಜನರನ್ನು ಹಾಸ್ಯಕೂಟಕ್ಕೆ ಬರುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ ಸೆಪ್ಟೆಂಬರ್ ತಿಂಗಳ ಐದನೇ ತಾರೀಖಿನಂದು ಬರುವ ಶಿಕ್ಷಕ ದಿನಾಚರಣೆ ನಿಮಿತ್ತ ವಿಷಯದ ಶೀರ್ಷಿಕೆ ತಲೆ ಕೆಡಿಸಿ ಕೊಳ್ಳುವಂಥಹುದಲ್ಲ ಅಗದೀ ಸರಳವಾಗಿ ಮತ್ತೇನು ಗುರು? ಎಂಬ ವಿಷಯ. ಇಲ್ಲಿ ಗುರುವಿನ ಕಾಲಿಗೆ ಎರಗುವುದರಿಂದ ಹಿಡಿದು ಗುರುವಿನ ಕಾಲೆಳೆಯುವವರೆಗೂ ಏನು ಬೇಕಾದರೂ ಮಾತನಾಡಬಹುದು. ಇನ್ನು ಮಕ್ಕಳ ದಿನಾಚರಣೆ ಹಾಗೂ ಮಧುಮೇಹಿಗಳ ದಿನಾಚರಣೆಯ ಎರಡೂ ನವೆಂಬರ್ ತಿಂಗಳಲ್ಲಿ ಬರುವುದರಿಂದ ಆ ತಿಂಗಳ ವಿಷಯ ಮಧು–ನಗು–ಮಗು. ಮಹಿಳಾ ದಿನಾಚರಣೆ ಸಂದರ್ಭದಲ್ಲಿನ ವಿಷಯ ಎಲ್ಲರಂಥವನಲ್ಲ ನನ ಗಂಡ, ಮಡದಿಯ ಮಾತು ಕೇಳ ಬೇಕೆ? ಬೇಡವೆ? ಇತ್ಯಾದಿ. ಈ ಭಾಗದ ಉದಯೋನ್ಮುಖ ಕಲಾವಿದರಿಗೆ ಇದೊಂದು ವರದಾನ ವೇದಿಕೆಯಾಗಿದೆ. ಇಲ್ಲಿ ಐದು ನಿಮಿಷಗಳು ಮಾತ್ರ ಅವಕಾಶ ಕೇಳಿ ಬಂದ ಬೈಲ ಹೊಂಗಲದ ಎಂ.ಬಿ.ಹೊಸಳ್ಳಿ, ಬೆಳಗಾವಿ ಜಿ.ಎಸ್. ಸೋನಾರ್, ರಾಜೇಂದ್ರ ಭಂಡಾರಿ ಇಂದು ರಾಜ್ಯಮಟ್ಟದಲ್ಲಿ ಬೆಳೆದು ನಿಂತಿದ್ದಾರೆ.



ಜಂಜಡದ ಹಳವಂಡದ ಅಜ್ಞಾನಿಗಳೇ ಹೆಚ್ಚಾಗುತ್ತಿರುವ ಈ ದಿನಗಳ ನಗುತ್ತಾ, ನಗಿಸುತ್ತಾ ಜನರನ್ನು ಹಗುರ ಮಾಡುತ್ತಿರುವ ಬೆಳಗಾವಿಯ ಹಾಸ್ಯಕೂಟದಂತಹವು ಮಾವು, ಬೇವಿನ ಮರಗಳಂತೆ ಬೆಳೆದು ಹಬ್ಬಬೇಕು. ಇಂಥಹ ಸಂಘಟನೆಗಳಿಗೆ ಐದಲ್ಲ, ಐವತ್ತಲ್ಲ ಐದುನೂರು, ವರ್ಷವಾಗಬೇಕು. ಇಂಥ ಸಂಘಟನೆಗಳು, ಗುಂಡೇನಟ್ಟಿಯಂಥ ಸಂಘಟಕರು ಇರುವ ಈ ನೆಲದಲ್ಲೇ ನಗುವುದಕ್ಕೂ ಯೋಚಿಸುವ, ನಕ್ಕರೆ ಅಪಮಾನವಾಗುತ್ತದೆ ಎಂದು ಭಾವಿಸುವ ಪಶುಗಳೂ ಇವೆ ಎಂಬುದು ನನಗೆ ಆಶ್ಚರ್ಯ ನೀಡುತ್ತದೆ.

ವ್ಯತಿರಿಕ್ತವಾದ ಇನ್ನೊಂದು ಅನುಭವ ಹೀಗಿದೆ. ಅದೊಂದು ಊರು ಅಲ್ಲೊಂದು ಕುಟುಂಬ ಎಲ್ಲರೂ ಅವರ ಮನೆಯಲ್ಲಿ ರ್‍ಯಾಂಕ್, ಗೋಲ್ಡಮೆಡಲ್ ಪಡೆದ ಬುದ್ಧಿ(?)ವಂತರೇ, ಕೆಂಪಗೆ, ಆಕರ್ಷಕ ಮೈಕಟ್ಟಿನ ಸುಂದರಕಾಯದ ಹೆಣ್ಣು, ಗಂಡು ಮಕ್ಕಳಿರುವ ತುಂಬು ಕುಟುಂಬ. ತಂದೆ ದೊಡ್ಡ ಸರಕಾರಿ ಉದ್ಯೋಗಿ, ಅಧಿಕಾರವನ್ನು ಎಷ್ಟು ದುರ್ಬಳಕೆ ಮಾಡಿಕೊಳ್ಳಬೇಕೋ ಅದಕ್ಕಿಂತ ಹೆಚ್ಚೇ ದುರ್ಬಳಕೆ ಮಾಡಿ ಹಣಗಳಿಸಿ ಬೃಹತ್ ಬಂಗಲೆ ಕಟ್ಟಿಸಿದ್ದರು. ಎಂಟು ಬೆಡ್ ರೂಂಗಳಿರುವ ಮನೆ ಅದು, ಪ್ರತಿಯೊಬ್ಬರಿಗೂ ಅವರದೇ ಸ್ವಂತ ಕಾರು, ಒಂದೇ ಮನೆಯಲ್ಲಿ ಎಂಟು ಟಿ.ವಿ. 8 ಪಾಯಿಖಾನೆ, ಒಬ್ಬರದನ್ನು ಇನ್ನೊಬ್ಬರು ಬಳಸುವಂತಿಲ್ಲ, ಪ್ರತಿಯೊಬ್ಬರದೂ ಅವರವರದೇ ಸೋಪು, ಪೇಸ್ಟು, ಶೂಸು, ಚಪ್ಪಲಿ–ಪ್ರತ್ಯೇಕ, ಸಹಬಾಳ್ವೆ ಎಂಬುದೇ ಇಲ್ಲ, ಮುಳ್ಳುಗಳಂತೆ ತಂದೆ ಎಂಬ ಜಾಲಿಗಿಡದಲ್ಲಿ ಬೆಳೆದಿದ್ದರಾಗಲಿ ಪ್ರತಿಯೊಬ್ಬರೂ ತುದಿಯೂ ಚೂಪು, ಇನ್ನೊಬ್ಬರಿಗೆ ಚುಚ್ಚಿಕೊಳ್ಳುತ್ತಿದ್ದರು. ಒಂದೇ ಗಿಡದ ಹೂವುಗಳಿಂತಿರದೆ, ಒಂದೇ ಗಿಡದ ಮುಳ್ಳುಗಳಿದ್ದಂತೆ ಇದ್ದರು. ಆದರೆ, ಅವರ ಮನೆಯಲ್ಲಿ ಇರಲಾದ ವಸ್ತುವೆಂದರೆ ನಗು ಒಂದೇ. ಯಾರ ಮುಖದಲ್ಲೂ ನಗುವಿಲ್ಲ, ನಗುವೆಂದರೆ ಗೊತ್ತೇ ಇಲ್ಲ. ಇವರೆಲ್ಲರ ಪಿತಾಮಹ–ತಂದೆ ಎಂಬ ಮಹಾನುಭಾವ ಸರಕಾರಿ ನೌಕರಿ ಇರುವವರೆಗೂ ದುಡ್ಡು–ಬಂಗಾರವನ್ನು ಬಾಚಿ ಬಾಚಿ ಬಳಿದು ಸಂಗ್ರಹಿಸಿದ. ದೇವರ ಗುಡಿಯಲ್ಲೇ ಸಿಕ್ಕ ಒಂದು ರೂಪಾಯಿಯನ್ನು ಹುಂಡಿಗೆ ಹಾಕದೆ ಮನೆಗೇ ತಂದು ಹಾಕಿದ. ನಿವೃತ್ತಿಯಾದ ಕೂಡಲೇ ಅದೇನು ಅಜ್ಞಾನ ಉದಯವಾಯಿತೋ ಕಾಣೆ–ನವರಂಧ್ರಗಳಲ್ಲೂ ಭಕ್ತಿ–ದೇವರು–ಧರ್ಮಗಳ ಜಾಗೃತಿಯಾಗಿ ಬಿಟ್ಟಿತು.

ನೌಕರಿ ಇದ್ದಾಗ ರಾಕ್ಷಸನಂತಿದ್ದವ, ನಿವೃತ್ತಿಯಾದ ಮೇಲೆ ದೇವರು, ಮಡಿ, ಮೈಲಿಗೆ ಪೂಜೆ ಎನ್ನುತ್ತಾ ಬ್ರಹ್ಮ ರಾಕ್ಷಸನಾದ. ಇಡೀ ಮನೆ ಕೇದಗೆಯ ಬನ, ನೋಡಲು ಎಲ್ಲರೂ ಚೆಂದ. ಆದರೆ, ಅಲ್ಲಿರುವವರೆಲ್ಲ ಹಾವುಗಳೇ. ಈ ಮಹಾನುಭಾವ ಒಮ್ಮೆ ನನ್ನ ಒಂದು ಕಾರ್ಯಕ್ರಮಕ್ಕೆ ಏಕೆ ಬಂದಿದ್ದನೋ, ಯಾರಿಗಾಗಿ ಬಂದಿದ್ದನೋ ಗೊತ್ತಿಲ್ಲ, ಮುಂದೆ ಬಂದು ಕೂತಿದ್ದು ಇಡೀ ಸಭಾಂಗಣದಲ್ಲಿ ನಗುತ್ತಿದ್ದರೆ, ಮುಖ ಗಂಟು ಹಾಕಿ ನನ್ನನ್ನೇ ದುರುಗುಟ್ಟಿ ನೋಡುತ್ತಾ ಕೂತಿದ್ದ. ಕಾರ್ಯಕ್ರಮದ ಹೆಸರು 'ನಗುನಗುತಾ ನಲಿ, ಏನೇ ಆಗಲಿ'. ಆದರೆ, ಈ ವ್ಯಕ್ತಿ ಏನೇ ಆಗಲಿ ನಗಬಾರದೆಂದೇ ಕೂತಿದ್ದ. ನಾವು ನಗೆ ಭಾಷಣಕಾರರು ತಾಯಿ ಇದ್ದಂತೆ ಏಕೆಂದರೆ ಆರೋಗ್ಯವಾಗಿರುವ ಎಂಟು ಮಕ್ಕಳನ್ನು ತಾಯಿ ಗಮನಿಸುವುದಿಲ್ಲ, ಕಾಯಿಲೆ ಬಿದ್ದ ಮಗುವನ್ನೇ ಹೇಗೆ ನೋಡುತ್ತಿರುತ್ತಾಳೋ ಹಾಗೆ ಇಡೀ ಸಭಾಂಗಣ ಬಿದ್ದು ಬಿದ್ದು ನಗುತ್ತಿದ್ದರೂ ನಗದ ಈ ಕಾಯಿಲೆ ಮಗುವಿನ ಮೇಲೆ ನನ್ನ ಮನವಿತ್ತು. ಸಭೆ ಮುಗಿದು ನಾನು ಹೊರಡಲು ಅಣಿಯಾಗುತ್ತಿದ್ದೆ. ವೇದಿಕೆ ಹಿಂಭಾಗಕ್ಕೆ ಬಂದ ಈ ವ್ಯಕ್ತಿ 'ನಗುತ್ತಾ ಇರಿ, ನಗ್ರಿ ಅಂತ ಹೇಳ್ತಿರಲ್ಲರಿ, ಸದಾ ನಗೋರು ಸೂಳೇರು, ಅವರು ಸದಾ ನಗುತ್ತಿರಬೇಕು, ನಾವಲ್ಲ ಎಂದು ಬಿಡಬೇಕೆ?

ಎಷ್ಟು ವಿಚಿತ್ರ ಈ ಜಗತ್ತು. ಜನರನ್ನು ನಗಿಸಬೇಕೆಂದೇ ಸಂಘ ಕಟ್ಟಿರುವ ಬೆಳಗಾವಿ ಗುಂಡೇನಟ್ಟಿ ಹಾಗೂ ಅವರ ನಗೆಕೂಟದ ಜನರಿರುವ ಈ ನೆಲದ ಮೇಲೆಯೇ ಇಂಥಹ ನಗುವವರನ್ನು ಕಂಡರೆ ಕೆಂಡಕಾರುವವರನ್ನೂ ಸೃಷ್ಟಿ ಮಾಡಿರುವ ದೇವರ ಲೀಲೆಗೆ ಬೆರಗಾದೆ. ಇಂತಹವರನ್ನು ತಿದ್ದುವ ಕೆಲಸ ನಮ್ಮಿಂದಾಗದು ಇವರನ್ನು ದೇವರ ಪಾದಕ್ಕೇ ಒಪ್ಪಿಸುವುದು ಒಳಿತು.